**ಮೇ: ಪ್ರಧಾನ  ದಿವಾಣಿ ನ್ಯಾಯಾಧೀಶರು ಹಾಗೂ  ಜೆಎಂಎಫ್‌ಸಿ ನ್ಯಾಯಾಲಯ, ಮುಧೋಳ**

CC.No. 809/2012
ಸಿಡಬ್ಲ್ಯೂ-8  ಪಿ.ಡಬ್ಲ್ಯೂ-5

| | |
|---|---|
| ಹೆಸರು | ಗಂಗವ್ವ ಡೊಂಗಿ |
| ಗಂಡನ ಹೆಸರು | ಆನಂದ |
| ವಯಸ್ಸು | 31 ವರ್ಷ |
| ಉದ್ಯೋಗ | ಗೃಹಿಣಿ |
| ವಾಸಸ್ಥಳ | ಮುಧೋಳ. |

**ದಿನಾಂಕ: 07-08-2024 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಎ.ಪಿ.ಪಿ ರವರಿಂದ.**

ನನಗೆ ಚಾಸಾ-1, 4 ರಿಂದ 6 ರವರ ಪರಿಚಯ ಇರುತ್ತದೆ. ಈಗ ಸುಮಾರು 10-13 ವರ್ಷಗಳ ಹಿಂದೆ ಚಾಸಾ-1 ರವರ ಮನೆ ಕಳ್ಳತನವಾಗಿತ್ತು. ಚಾಸಾ-1 ರವರು ಹೊರಗಡೆ ಹೋದಾಗ ಅವರ ಮನೆ ಕಳ್ಳತನವಾಗಿರುತ್ತದೆ ಎಂದು ನನಗೆ ತಿಳಿದು ಬಂದಿರುತ್ತದೆ. ನಾನು ಚಾಸಾ-1 ರವರ ಮನೆಗೆ ದಿನಾಲು ಕೆಲಸ ಮಾಡಲು ಹೋಗುತ್ತಿದ್ದೆ. ನಾನು ದಿನಾಲು ನನ್ನ ಮಕ್ಕಳನ್ನು ಚಾಸಾ-1 ರವರ ಕೈ ತೋಟದಲ್ಲಿ ಆಡಲು ಬಿಟ್ಟು ಬೇರೆಯವರ ಮನೆಗೂ ಸಹ ಕೆಲಸಕ್ಕೆ ಹೋಗುತ್ತಿದ್ದೆ. ನಾನು ಘಟನೆಯ ದಿನ ಮದ್ಯಾಹ್ನ 3-00 ಗಂಟೆಗೆ ಚಾಸಾ-1 ರವರು ಮನೆಗೆ ಬಂದಾಗ ಚಾಸಾ-1 ರವರು ಮನೆ ಕಳ್ಳತವಾಗಿರುವುದು ಕಂಡಬಂದಿತು. ನನಗೆ ಚಾಸಾ-1 ರವರು ಮನೆಯಲ್ಲಿ ಯಾರು ಕಳ್ಳತನ ಮಾಡಿರುತ್ತಾರೆ ಎಂದು ನನಗೆ ಮಾಹಿತಿ ಇರುವುದಿಲ್ಲ.

***(ಈ ಹಂತದಲ್ಲಿ ಸಾಕ್ಷಿಯನ್ನು  ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಸ.ಸ.ಅ ರವರು ವಿನಂತಿಸಿದ್ದರಿಂದ ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ  ಸಾಕ್ಷಿ ಎಂದು ಪರಿಗಣಿಸಿ  ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)***

**ಪಾಟಿ ಸವಾಲು- ಎ.ಪಿ.ಪಿ ರವರಿಂದ.**

ಕಳ್ಳತನವಾದ ದಿನ ಚಾಸಾ-1 ರವರು ದಾರವಾಡಕ್ಕೆ ಹೋಗಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಮದ್ಯಾಹ್ನ 3-00 ಗಂಟೆಗೆ ಚಾಸಾ-1 ರವರು ಮನೆಗೆ ಬಂದಾಗ ಒಬ್ಬ ವ್ಯಕ್ತಿ ಕುಳಿತಿದ್ದನು ಎಂದರೆ ಸರಿ ಸಾಕ್ಷಿ ಮುಂದುವರೆದು ಅಲ್ಲಿ ಜಾಗವನ್ನು ಹಡ್ಡುವ ವ್ಯಕ್ತಿಗಳು ಸಹ ಇದ್ದರು ಎಂದು ನುಡಿಯುತ್ತಾರೆ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿತರು ಘಟನೆಯ ದಿನ ಚಾಸಾ-1 ರವರ ಮನೆಯಲ್ಲಿರಲಿಲ್ಲ.

ನನಗೆ ನಂತರ ಆರೋಪಿತರು ಚಾಸಾ-1 ರವರ ಮನೆಯಲ್ಲಿಯ ಬಂಗಾರದ ಆಭರಣಗಳನ್ನು ಕಳ್ಳತನ ಮಾಡಿರುತ್ತಾರೆ ಎಂದು ನನಗೆ ತಿಳಿದುಬಂದಿರುತ್ತದೆ ಎಂದರೆ ಸರಿ. ಆರೋಪಿ ನಂ.1 ಇವನು ಚಾಸಾ-1 ರವರ ಮನಯಲ್ಲಿ ಚಾಲಕ ಅಂತಾ ಕೇಲಸ ಮಾಡುತ್ತಿದ್ದನು ಎಂದರೆ ಸರಿ. ಈಗ ನ್ಯಾಯಾಲಯಕಿದ ಮುಂದೆ ಇರುವ ಆರೋಪಿತರೇ ಚಾಸಾ-1 ರವರ ಮನೆಯಲ್ಲಿಯ ಬಂಗಾರದ ಆಭರಣಗಳನ್ನು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ.

ದಿನಾಂಕ 21.06.2012 ರಂದು ನನಗೆ ಪೋಲಿಸರು ಪೋಲಿಸ ಠಾಣೆಗೆ ಕರೆಯಿಸಿ ಅಲ್ಲಿದ್ದ 05 ಜನ ಆರೋಪಿತರನ್ನು ತೋರಿಸಿ ಇವರೆ ಚಾಸಾ-1 ರವರ ಮನೆಯಲ್ಲಿದ್ದ ಆಭರಣಗಳನ್ನು ಕಳ್ಳತನ ಮಾಡಿಕೊಂಡು ಹೋದ ವ್ಯಕ್ತಿಗಳು ಆಗಿರುತ್ತಾರೆ ಎಂದು ಹೇಳಿದ ಮೇರೆಗೆ ನಾನು ಅವರನ್ನು ನೋಡಿರುತ್ತೇನೆ ಮತ್ತು ಸದರಿ ವ್ಯಕ್ತಿಗಳು ಈಗ ನ್ಯಾಯಾಲಯದ ಮುಂದೆ ಇರುತ್ತಾರೆ ಎಂದರೆ ಸರಿಯಲ್ಲ.

ಈ ಪ್ರಕರಣದ ವಿಚಾರಣೆ ಕಾಲಕ್ಕೆ ನಾನು ದಿನಾಂಕ 21.06.2012 ರಂದು ಈಗ ನನಗೆ ಓದಿ ಹೇಳಿದ ಹಾಗೇ ಮರು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮರು ಹೇಳಿಕೆಯನ್ನು ಈಗ ನಿಪಿ-16 ಎಂದು ಗುರುತಿಸಲಾಯಿತು. ನಿಪಿ-16 ರಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದ್ದರೂ ಸಹಿತ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ** ಆರೋಪಿತರ ಪರ ವಕೀಲರು ಪಾಟಿ ಸವಾಲು ಏನು ಇಲ್ಲ ಎಂದು ನುಡಿದಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-
ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆಎಂಎಫ್‌ಸಿ ಮುಧೋಳ.

ಸಾಕ್ಷಿಯ ಸಹಿ